ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(4)/18/2023 36

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 05.04.2024

**ಅಧಿಕೃತ ಜ್ಞಾಪನ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಗ್ರೂಪ್–ಡಿ(ಕಛೇರಿ ಸೇವಕ) ಸಿಬ್ಬಂದಿಗಳಿಗೆ ಗ್ರೂಪ್-ಡಿ(ಕಛೇರಿ ಸಹಾಯಕ) ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಹಿಂಪಡೆಯುವ ಕುರಿತು.

**ಉಲ್ಲೇಖ:** 1. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:DTE-ADMIOEST(4)18/2023/1558, ದಿ:30.12.2023.
2. ಸಿಬ್ಬಂದಿಗಳು ಸಲ್ಲಿಸಿರುವ ಮನವಿ ಮೇರೆಗೆ

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ಉಳಿದ ಮೂಲ ವೃಂದ / ಸ್ಥಳೀಯ ವೃಂದದಲ್ಲಿನ ಗ್ರೂಪ್–ಡಿ(ಕಛೇರಿ ಸೇವಕ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರ್ಹ ಸಿಬ್ಬಂದಿಗಳಿಗೆ ಖಾಲಿಯಿರುವ ಗ್ರೂಪ್-ಡಿ(ಕಛೇರಿ ಸಹಾಯಕ) ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿತ್ತು. ಕೆಳಕಂಡ ಸಿಬ್ಬಂದಿಗಳು ಕೌಟುಂಬಿಕ ಕಾರಣಗಳ ನಿಮಿತ್ತ ಮುಂಬಡ್ತಿ ನಿರಾಕರಿಸಿ ಮನವಿ ಸಲ್ಲಿಸಿರುತ್ತಾರೆ / ನಿಯಮಾನುಸಾರ ಮುಂಬಡ್ತಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿರುವುದಿಲ್ಲ. ಈ ಹಿನ್ನಲೆಯಲ್ಲಿ ಸದರಿ ಸಿಬ್ಬಂದಿಗಳಿಗೆ ಗ್ರೂಪ್-ಡಿ(ಕಛೇರಿ ಸಹಾಯಕ) ಹುದ್ದೆಗೆ ನೀಡಿರುವ ಮುಂಬಡ್ತಿಯನ್ನು ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977 ರ ನಿಯಮ 4(ಎ) ರಂತೆ ಹಿಂಪಡೆಯಲಾಗಿದೆ.

| ಕ್ರ. ಸಂ. | ಮುಂಬಡ್ತಿ ಆದೇಶದ ಕ್ರಮಾಂಕ | ಗ್ರೂಪ್–ಡಿ(ಕಛೇರಿ ಸೇವಕ) ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಹೆಸರು | ಗ್ರೂಪ್–ಡಿ(ಕಛೇರಿ ಸಹಾಯಕ) ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಲಾಗಿದ್ದ ಸಂಸ್ಥೆ |
|---|---|---|---|
| ಉಳಿದ ಮೂಲ ವೃಂದ | | | |
| 1. | 21 | ದೇವರಾಜ ಬಿ.ಹೆಚ್.<br>ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ | ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ |
| 2. | 44 | ಅಜಯ್ ಕುಮಾರ್ ಬಿ.<br>ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ |
| 3. | 49 | ಮೈಥಿಲ್ ಕಾಂತನ್ ಕೆ.<br>ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ |
| 4. | 56 | ಸುರೇಶ್ ಜಿ.<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ |
| ಸ್ಥಳೀಯ ವೃಂದ | | | |
| 1. | 2 | ಲಕ್ಷ್ಮಣ್<br>ಸರ್ಕಾರಿ ಪಾಲಿಟೆಕ್ನಿಕ್, ಕಲಬುರಗಿ | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರಗಿ |

**"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

ನಿರ್ದೇಶಕರು,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

...2/-

ಇವರಿಗೆ:-

1. ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್ / ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ (ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ);
2. ಸಂಬಂಧಪಟ್ಟ ಗ್ರೂಪ್–ಡಿ(ಕಛೇರಿ ಸೇವಕ) ಸಿಬ್ಬಂದಿಗಳಿಗೆ(ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ);
3. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಶಾಖಾ ರಕ್ಷಾ ಕಡತ.